# ಸರಳ ಜೀವನ, ಉದಾತ್ತ ಚಿಂತನೆ

**(‘ಪ್ರೇರಕಪ್ರಸಂಗ’ ಎಂಬ ಹಿಂದೀ ಗ್ರಂಥದಿಂದ ಆಯ್ದ ಕಥೆ)**





ರಾಮಶಾಸ್ತ್ರಿಗಳು ಅತ್ಯಂತ ಪ್ರಾಮಾಣಿಕರೂ ದೈವಭಕ್ತರೂ ನಿರಾಡಂಬರಮೂರ್ತಿಗಳೂ ಆಗಿದ್ದರು. ಅವರು ಪುಣೆಯ ಪೇಶ್ವೆ ರಘುನಾಥ ರಾಯನ ಆಸ್ಥಾನದಲ್ಲಿ ಮುಖ್ಯ ನ್ಯಾಯಮೂರ್ತಿಯಾಗಿದ್ದರು. ಅವರ ಮಡದಿ ಜಾನಕಿ, ಶ್ರೀರಾಮನಿಗೆ ಸೀತಾದೇವಿ ಹೇಗೋ ಹಾಗೆ; ಜಾನಕಿ ಅಮ್ಮನವರು ರಾಮಾಶಾಸ್ತ್ರಿಗಳ ಹೆಜ್ಜೆಗುರುತುಗಳ ಮೇಲೆ ನಡೆಯುತ್ತಿದ್ದರು. ಒಂದು ಸಲ ಪೇಶ್ವೆಯ ಅರಮನೆಯಲ್ಲಿ ಯಾವುದೋ ವ್ರತಾಚರಣೆ ನಡೆದು, ಅದರಲ್ಲಿ ಸುವಾಸಿನಿಯರನ್ನು ಪೂಜಿಸುವ ಸಂದರ್ಭ ಒದಗಿ ಬಂತು. ರಾಣಿ ರಮಾಬಾಯಿಯ ಅಂತಃಪುರದಿಂದ ಪೂಜೆ ಸ್ವೀಕರಿಸಬೇಕೆಂದು ಜಾನಕಿಯವರಿಗೂ ಕರೆ ಬಂದಿತು. ಅದಕ್ಕೊಪ್ಪಿ ಅವರು ಪತಿಯ ಅಪ್ಪಣೆ ಪಡೆದು ಅರಮನೆಗೆ ಹೋದರು.

ಜಾನಕಿಯವರಂತೆಯೇ ಹಲವು ಮುತ್ತೈದೆಯರು ಅಲ್ಲಿ ನೆರೆದಿದ್ದರು. ಅಲ್ಲಿಯೇ ಅಲಂಕಾರ ಮಾಡಿಕೊಳ್ಳಬೇಕೆಂದು ರಾಣಿಯು ಅವರಿಗೆಲ್ಲ ಪಟ್ಟೆಪೀತಾಂಬರಗಳನ್ನೂ, ಸ್ವರ್ಣಾಭರಣಗಳನ್ನೂ ಕೊಟ್ಟಳು. ಅವರೆಲ್ಲ ಅಲಂಕರಿಸಿಕೊಂಡ ಬಳಿಕ, ರಾಣಿಯು ಅವರ ಪಾದಪೂಜೆಮಾಡಿ, ಬಾಗಿನಗಳನ್ನು ಕೊಟ್ಟು ಸತ್ಕರಿಸಿದಳು. ‘‘ಈ ಅಲಂಕರಣ ವಸ್ತುಗಳೆಲ್ಲ ನನಗೆ ಬೇಡ ಮಹಾರಾಣಿ’’ ಎಂದು ಜಾನಕಿ ಹೇಳಿದರೂ ಅವಳು ಕೇಳಲಿಲ್ಲ. ‘‘ನೀವೆಲ್ಲ ಈ ಅಲಂಕಾರದಲ್ಲಿಯೇ ನಿಮ್ಮ ನಿಮ್ಮ ಮನೆಗಳಿಗೆ ತೆರಳಬೇಕು’’ ಎಂದು ಒತ್ತಾಯಪಡಿಸಿದಳು. ರಾಣಿಯ ಒತ್ತಾಯಕ್ಕೆ ಜಾನಕಿಯವರೂ ಮಣಿಯಬೇಕಾಯಿತು. ಅದರಂತೆ ತಾವು ಮನೆಯಿಂದ ಬರುವಾಗ ಉಟ್ಟಿದ್ದ ಸರಳವಸ್ತ್ರಗಳನ್ನು ಚೀಲದಲ್ಲಿಟ್ಟುಕೊಂಡು ಮನೆಗೆ ಹಿಂತಿರುಗಿ ಬಂದರು.

ರಾಮಶಾಸ್ತ್ರಿಗಳು ಮನೆಯ ಹೊರಗೆ ನಿಂತು, ಮಡದಿಯು ಬರುವ ದಿಕ್ಕನ್ನೇ ನಿಟ್ಟಿಸುತ್ತಿದ್ದರು. ಹೆಚ್ಚಿನ ಅಲಂಕಾರ ಮಾಡಿಕೊಂಡು ಬರುತ್ತಿದ್ದ ಆಕೆಯನ್ನು ದೂರದಿಂದಲೇ ಕಂಡು, ಮನೆಯನ್ನು ಹೊಕ್ಕು, ಒಳಗಿನಿಂದ ಚಿಲಕ ಹಾಕಿಕೊಂಡುಬಿಟ್ಟರು. ಜಾನಕಿಯವರು ಬಂದು, ‘‘ಬಾಗಿಲು ತೆರೆಯಿರಿ’’ ಎಂದು ಹೊರಗಿನ ಚಿಲಕವನ್ನು ಸದ್ದುಮಾಡಿದರು. ಆಗ ನಾಟಕೀಯ ಸಂಭಾಷಣೆಯೇ ನಡೆಯಿತು. ಶಾಸ್ತ್ರಿಗಳು ಒಳಗಿನಿಂದ, ‘‘ಯಾರದು?’’ ಎಂದರು. ಜಾನಕಿಯವರು, ‘‘ನಾನು’’ ಎಂದರು. ‘‘ನಾನು ಎಂದರೆ ಯಾರು?’’ ‘‘ನಾನು ನಿಮ್ಮ ಹೆಂಡತಿ, ಜಾನಕಿ’’ ಎಂದು ಉತ್ತರಿಸಿದರು. ಆಗ ಶಾಸ್ತ್ರಿಗಳು, ‘‘ಇಲ್ಲ ಇಲ್ಲ, ನೀನು ನನ್ನ ಹೆಂಡತಿಯಲ್ಲ. ನನ್ನ ಹೆಂಡತಿ ಹೀಗೆಲ್ಲ ರೇಷ್ಮೆಯ ವಸ್ತ್ರಗಳನ್ನು ಉಡುವುದಿಲ್ಲ, ಚಿನ್ನದ ಒಡವೆಗಳನ್ನು ತೊಡುವುದಿಲ್ಲ’’ ಎಂದು ಗಡುಸಾಗಿ ಹೇಳಿದರು.

ಆಗ ಜಾನಕಿ ಅಮ್ಮನವರಿಗೆ ಎಲ್ಲವೂ ಅರ್ಥವಾಯಿತು. ಅವರು ಸಂಕೋಚದಿಂದ ಮುದುಡಿಕೊಂಡುಬಿಟ್ಟರು. ಬೇರೆ ದಾರಿ ಕಾಣದೆ, ಆಗಿಂದಾಗಲೇ ಅರಮನೆಗೆ ಹೋಗಿ, ನಡೆದ ಸಂಗತಿಯನ್ನೆಲ್ಲ ರಾಣಿಗೆ ವಿವರಿಸುತ್ತ, ‘‘ನಾನು ನನ್ನ ಮನೆಯನ್ನು ಸೇರಿಕೊಳ್ಳಲು ನೀವು ಅವಕಾಶ ಮಾಡಿಕೊಡಬೇಕು’’ ಎಂದು ಕೇಳಿಕೊಂಡರು. ರಾಣಿಯು ಆಶ್ಚರ್ಯಚಕಿತೆಯೂ ಅಸಹಾಯಕಳೂ ಆದಳು. ‘‘ನಿಮ್ಮ ಯಜಮಾನರ ಇಷ್ಟದಂತೆಯೇ ನಡೆದುಕೊಳ್ಳಿ’’ ಎಂದಳು. ಆಗ ಜಾನಕಿಯವರು ಅಲಂಕರಣಗಳನ್ನೆಲ್ಲ ಅಲ್ಲಿಯೇ ಕಳಚಿಟ್ಟು, ಚೀಲದಲ್ಲಿಟ್ಟುಕೊಂಡಿದ್ದ ಸಾದಾ ಉಡುಪು ಧರಿಸಿ ಮನೆಗೆ ಬಂದರು. ಮುಚ್ಚಿದ್ದ ಬಾಗಿಲು ಆಗ ಅವರಿಗಾಗಿ ತೆರೆಯಿತು.

ಸರಳಜೀವನ ನಡೆಸಬೇಕು, ಉದಾತ್ತ ಚಿಂತನೆ ಮಾಡಬೇಕು ಎಂದು ಹೇಳುತ್ತೇವಲ್ಲ, ಅದಕ್ಕೆ ರಾಮಶಾಸ್ತ್ರಿಗಳೊಂದು ಶ್ರೇಷ್ಠ ಉದಾಹರಣೆ. ನಮಗೆಷ್ಟು ಬೇಕೋ ಅಷ್ಟನ್ನು ಮಾತ್ರವೇ ನಮ್ಮ ಬಳಿ ಇಟ್ಟುಕೊಂಡಿರುವ ತತ್ತ್ವಕ್ಕೆ ‘ಪರಿಮಿತ ಪರಿಗ್ರಹ’ ಎಂದು ಹೆಸರು. ಆ ತತ್ತ್ವಕ್ಕೆ ಬದ್ಧರಾಗಿ ನಡೆಯಬೇಕೆಂಬ ‘ತತ್ತ್ವನಿಷ್ಠುರತೆ’ ಕೂಡ ಇಲ್ಲಿ ಮುಖ್ಯವಾದ ವಿಚಾರ.

*ಅನುವಾದ:* ***ಡಾ. ಅನಂತರಾಮು***